**ಒ.ಎಸ್.ನಂಬ್ರಃ 385/2018 ಪಿ.ಡಬ್ಲ್ಯೂ: 1**

ದಿನಾಂಕಃ 29-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಎಸ್.ಎ. ರವರಿಂದ**

ನಾನು ಪದವಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೋ- ಆಪರೇಟಿವ್ ಸೊಸೈಟಿನಲ್ಲಿ ಸಿ.ಇ.ಓ. ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಖಾಯಂ ವಿಳಾಸ ದೊಡ್ಡ ಮನೆ, ಉಳ್ಳೂರು ಗ್ರಾಮ ಆಗಿರುತ್ತದೆ. ಬೆಳ್ಳಾಲ ಗ್ರಾಮದಿಂದ ಉಳ್ಳೂರು ಗ್ರಾಮಕ್ಕೆ ಸುಮಾರು 28 ಕಿ.ಮೀ ದೂರ ಆಗುತ್ತದೆ. ನನ್ನ ತಾಯಿ ಮದುವೆ ಆದ ವರ್ಷ ಗೊತ್ತಿಲ್ಲ. 22 ನೇ ಪ್ರತಿವಾದಿ ನನ್ನ ತಾಯಿ. ನನ್ನ ತಾಯಿಯ ದೊಡ್ಡ ಮಗನಿಗೆ ಸುಮಾರು 48 ವರ್ಷ ಆಗಿರುತ್ತದೆ. ನನ್ನ ತಾಯಿಗೆ 23 ನೇ ಪ್ರತಿವಾದಿ ಹಿರಿಯ ಮಗಳಾಗಿರುತ್ತಾರೆ. ನನ್ನ ತಾಯಿ ಮದುವೆ ಆದ ದಿನದಿಂದ ಇಲ್ಲಿಯವರೆಗೂ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದರು ಎಂದರೆ ಎರಡು ಕಡೆ ವಾಸ ಇರುವುದಾಗಿ ನುಡಿದಿರುತ್ತಾರೆ. ನನ್ನ ತಾಯಿಯು ಮದುವೆ ಆಗುವ ಹೊತ್ತಿಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಡಿಕ್ಲರೇಶನ್ ಕೊಟ್ಟಿದ್ದರು. ನಮ್ಮ ಕುಟುಂಬದವರಿಗೆ ಈಗಿನ ಪಡಿತರ ಚೀಟಿ ಇರುತ್ತದೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ತಂದೆ ನರಸಿಂಹ ಪೂಜಾರಿ, ಶ್ರೀಮತಿ, ರಾಜು, ಅನನ್ಯ,ಹರ್ಷಿತಾ ರವರ ಹೆಸರು ಕಂಡುಬರುತ್ತದೆ.

23 ನೇ ಪ್ರತಿವಾದಿಯ ಗಂಡನ ಹೆಸರು ಸುಬ್ಬಯ್ಯ ಪೂಜಾರಿ. ಅವರ ಮನೆ ಉಳ್ಳೂರು - 74 ರಲ್ಲಿ ಇರುತ್ತದೆ. ನಮ್ಮ ಮನೆಯಿಂದ 23 ನೇ ಪ್ರತಿವಾದಿ ಗಂಡನ ಮನೆಗೆ ಸುಮಾರು ಎರಡೂವರೆ ಕಿ.ಮೀ ದೂರ ಆಗುತ್ತದೆ. 25 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಅವರ ಗಂಡನ ಮನೆ ಕೋಟದ ಸಾಲಿಗ್ರಾಮ ಆಗಿರುತ್ತದೆ. 29 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಅವರ ಗಂಡನ ಮನೆ ಸಿದ್ದಾಪುರ ಆಗಿರುತ್ತದೆ. 31 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಅವರ ಗಂಡನ ಮನೆ ಉಳ್ಳೂರು - 74 ರ ಗ್ರಾಮದಲ್ಲಿ ಬೇರೆ ಮನೆ ಇರುತ್ತದೆ. 34 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಅವರ ಗಂಡನ ಮನೆ ಕಮಲಶಿಲೆ ಆಗಿರುತ್ತದೆ. 35 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಗಂಡನೊಂದಿಗೆ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾಳೆ. 36 ನೇ ಪ್ರತಿವಾದಿಗೆ 2 ವರ್ಷದ ಹಿಂದೆ ಮದುವೆ ಆಗಿರುತ್ತದೆ. ಆಕೆಯ ಗಂಡನ ಮನೆ ಕಮಲಶಿಲೆ ಆಗಿರುತ್ತದೆ. 37 ನೇ ಪ್ರತಿವಾದಿ ನಮ್ಮ ಮನೆಯಲ್ಲಿ ಬೇರೆ ಮನೆ ಮಾಡಿಕೊಂಡು ಇದ್ದಾಳೆ.

38 ನೇ ಪ್ರತಿವಾದಿಗೆ 2 ವರ್ಷದ ಹಿಂದೆ ಮದುವೆ ಆಗಿದ್ದು, ಗಂಡನ ಮನೆ ಶಂಕರನಾರಾಯಣದ ಕುಲುಂಜೆ ಆಗಿರುತ್ತದೆ. 42 ನೇ ಪ್ರತಿವಾದಿ ನಮ್ಮ ತಂದೆ - ತಾಯಿಯೊಂದಿಗೆ ವಾಸವಾಗಿದ್ದಾಳೆ. ನಾನು ನಮ್ಮ ತಂದೆಗೆ ಪಾಲಾದ ಜಾಗದಲ್ಲಿ ನಮ್ಮ ತಂದೆಯ ಮನೆಯ ಹತ್ತಿರ ಪ್ರತ್ಯೇಕ ಮನೆ ಮಾಡಿಕೊಂಡು ಇದ್ದೇನೆ. ಪ್ರತಿವಾದಿ 24, 28, 30, 33,41, 45, 46 ರವರುಗಳು ನಮ್ಮ ಮನೆಯಲ್ಲಿ ವಾಸವಾಗಿದ್ದಾರಾ ಎಂದರೆ ಸಾಕ್ಷಿ 24 ನೇ ಪ್ರತಿವಾದಿ ಮದುವೆ ಆಗಿ ಹೆಂಡತಿ ಮನೆಯಲ್ಲಿದ್ದು ನಮ್ಮ ಮನೆಗೆ ಬಂದು ಹೋಗುತ್ತಿರುತ್ತಾರೆ. 28 ನೇ ಪ್ರತಿವಾದಿ ಮದುವೆ ಆಗದೇ ಅವರ ಮನೆಯಲ್ಲಿಯೇ ವಾಸವಾಗಿದ್ದಾರೆ. 30 ನೇ ಪ್ರತಿವಾದಿ ಅವರ ಮನೆಯಲ್ಲಿ ವಾಸವಾಗಿದ್ದಾರೆ. 29 ನೇ ಪ್ರತಿವಾದಿ ಸಿದ್ಧಾಪುರದಲ್ಲಿ ವಾಸವಾಗಿದ್ದಾರೆ. 33 ನೇ ಪ್ರತಿವಾದಿ ಮದುವ ಆಗಿ ಕೆರಾಡಿ ಮತ್ತು ಉಳ್ಳೂರು ಎರಡು ಕಡೆ ವಾಸವಾಗಿದ್ದಾರೆ. 41 ನೇ ಪ್ರತಿವಾದಿ ನನ್ನ ತಂದೆಯ ಜಾಗದಲ್ಲಿ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದಾರೆ. 45 ನೇ

ಪ್ರತಿವಾದಿಗೆ ಮದುವೆ ಆಗಿದ್ದು, ತಾಯಿ ಮನೆಯಲ್ಲಿ ವಾಸವಾಗಿದ್ದು, ಬೆಂಗಳೂರಿಗೆ ಕೆಲಸಕ್ಕೆ ಹೋಗಿದ್ದಾರೆ. 46 ನೇ ಪ್ರತಿವಾದಿ ಉಳ್ಳೂರಿನಲ್ಲಿ ವಾಸವಾಗಿದ್ದಾರೆ.

ಹರಿಬಾಗಿಲು ಮಂಜು ಪೂಜಾರಿರವರು ಯಾರೆಂದು ನನಗೆ ಮಾಹಿತಿ ಇಲ್ಲ. ಹರಿಬಾಗಿಲು ಮಂಜು ಪೂಜಾರಿ ಮತ್ತು ವಾದ ಪತ್ರದಲ್ಲಿ ತಿಳಿಸಿರುವ ದುರ್ಗಿ ಮಗ ಮಂಜು ಪೂಜಾರಿ ಬೇರೆ ಬೇರೆ ಆಗಿರುತ್ತಾರೆ. ಟಿ .ಆರ್.ಐ. 521/81-82 ರ ಆದೇಶದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಮಂಜು ಪೂಜಾರಿ ಬಿನ್ ಈರ ಪೂಜಾರಿ ಯಾರೆಂದು ಗೊತ್ತಿಲ್ಲ. ದುರ್ಗಿಯ ತಾಯಿಯ ಮನೆ ಬೆಳ್ಳಾಲ ಗ್ರಾಮದ ವಂಡಬೈರು ಎಂದರೆ ಸರಿಯಲ್ಲ. ದುರ್ಗಿಯ ಒಡಹುಟ್ಟಿದವರು ಸುಬ್ಬ, ಗೋವಿಂದ, ಮಾಚ, ಅಮ್ಮಕ್ಕ, ಕಾಳು, ಎಂದರೆ ಸಾಕ್ಷಿ ಸುಬ್ಬ, ಮಾಚ, ಅಮ್ಮಕ್ಕ ದುರ್ಗಿಯ ಒಡಹುಟ್ಟಿದವರು, ಉಳಿದವರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಅಮ್ಮಕ್ಕನ ಮಕ್ಕಳು ಪಾರ್ವತಿ ಮತ್ತು ಉಷಾ. ಅಮ್ಮಕ್ಕನ ಗಂಡ ಕುಷ್ಟನ ತಂದೆಯ ಹೆಸರು ಗೊತ್ತಿಲ್ಲ. ಅಮ್ಮಕ್ಕನ ಗಂಡ ಕುಷ್ಟನ ತಂದೆ ಪಂಜು ಪೂಜಾರಿ ಎಂದರೆ ನನಗೆ ಮಾಹಿತಿ ಇಲ್ಲ.ಸದರಿ ಪಂಜು ಪೂಜಾರಿಯವರಿಗೆ ಟಿ .ಆರ್.ಐ. 638, 639/81-82 ರಂತೆ ವಂಡಬೈರು ಗ್ರಾಮದಲ್ಲಿರುವ ಕೆಲವು ಸ್ವತ್ತುಗಳು ಮಂಜೂರು ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ.

ಸುಬ್ಬ, ಗೋವಿಂದ, ಮಾಚ, ಅಮ್ಮಕ್ಕ, ಕಾಳುರವರು ದುರ್ಗಿಯ ಕುಟುಂಬದವರಾಗಿರುತ್ತಾರೆ. ಅಮ್ಮಕ್ಕನ ಗಂಡ ಕುಷ್ಟನ ತಂದೆಯವರ ಆಸ್ತಿಯಲ್ಲಿ ನಮಗೆ ಹಕ್ಕು ಇದೆಯಾ ಎಂದರೆ ಸಾಕ್ಷಿ ನಮಗೆ 1 ನೇ ಪ್ರತಿವಾದಿಯ ಸ್ವತ್ತುಗಳಲ್ಲಿ ಹಕ್ಕು ಮಾತ್ರ ಇದೆ ಎಂದು ನುಡಿದಿರುತ್ತಾರೆ. ನಿ.ಪಿ. 5 ರಲ್ಲಿ ಮಂಜೂರಾದ ಆಸ್ತಿ 1 ನೇ ಪ್ರತಿವಾದಿ ಮತ್ತು ಬೇರೆಯವರಿಗೆ ಜಂಟಿಯಾಗಿ ನೀಡಲಾಗಿರುತ್ತದೆ ಎಂದರೆ ಸರಿ. ನಿ.ಪಿ. 5 ರಲ್ಲಿ ಟಿ .ಆರ್.ಐ. 521, 526/81-82 ಮತ್ತು ಬೇರೆ ಪ್ರಕರಣಗಳನ್ನು ಒಟ್ಟು ಮಾಡಿ ಆದೇಶ ಮಾಡಲಾಗಿದೆ ಎಂದರೆ ಸರಿ. ಪಹಣಿ ಪತ್ರ, ನಮೂನೆ 7 ಮತ್ತು ಟಿ .ಆರ್.ಐ . ನಲ್ಲಿ ನೀಡಿರುವ ಆದೇಶದ ಆಧಾರದ ಮೇಲೆ ಒಟ್ಟು ಕುಟುಂಬದ ಆಸ್ತಿ ಎಂದು ಹೇಳುತ್ತಿದ್ದೇನೆ. ಭೂ ನ್ಯಾಯ ಮಂಡಳಿ ಆದೇಶದಲ್ಲಿ ಪಕ್ಷಗಾರರು ನೀಡಿರುವ ಹೇಳಿಕೆಗಳ ಪ್ರತಿಯನ್ನು ತಂದು ಹಾಜರು ಪಡಿಸಲು ತೊಂದರೆ ಇಲ್ಲ. ನಿ.ಪಿ. 5 ರ ಆಧಾರದ ಮೇಲೆ 1 ನೇ ಪ್ರತಿವಾದಿಗೆ ನೀಡಲಾದ ಸ್ವತ್ತು ಅಳಿಯ ಸಂತಾನದ ಸ್ವತ್ತಾ, ಸ್ವಂತಾ ಸ್ವತ್ತಾ ಎಂದರೆ ಒಟ್ಟು ಕುಟುಂಬದ ಆಸ್ತಿ ಎಂದು ಮಾತ್ರ ಹೇಳಬಹುದು.

ಡಿಕ್ಲರೇಶನ್ ಕೊಟ್ಟ ಸ್ವತ್ತುಗಳಿಗೆ ಮಾತ್ರ ತೀರ್ಪಾಗಿದೆಯಾ ಅಥವಾ ಬೇರೆ ಸ್ವತ್ತುಗಳಿಗೆ ತೀರ್ಪು ಆಗಿದೆಯಾ ಎಂದರೆ ನನಗೆ ಮಾಹಿತಿ ಇಲ್ಲ. ಡಿಕ್ಲರೇಶನ್ ಕೊಟ್ಟ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹಾಗೂ ತೀರ್ಪಿನಲ್ಲಿ ನೀಡಿರುವ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಸ್ವಲ್ಪ ವ್ಯತ್ಯಾಸ ಇದೆ ಎಂದರೆ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಒಂದೇ ಇರುತ್ತದೆ. ನಿ.ಪಿ.4 ರಲ್ಲಿ ಕೇಳಿರುವ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಂತ ಸ್ವತ್ತುಗಳಾಗಿದ್ದು, ಅವರೇ ಡಿಕ್ಲರೇಶನ್ ಕೇಳಿರುತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಕುಟುಂಬದ ಪರವಾಗಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ನಿ.ಪಿ.4 ರಲ್ಲಿ ಇರುವ ಸುಮಾರು 100 ವರ್ಷದ ಹಿಂದಿನಿಂದ ಎಂಬ ಉಲ್ಲೇಖದ ಆಧಾರದ ಮೇಲೆ ಕುಟುಂಬದ ಪರವಾಗಿ ಸಲ್ಲಿಸಿರುವುದಾಗಿ ಹೇಳಿರುತ್ತೇನೆ. 100 ವರ್ಷಗಳ ಹಿಂದೆ ಯಾರು ಗೇಣಿ ಪಡೆದಿದ್ದರು ಎಂದರೆ ದುರ್ಗಿಯ ತಾಯಿ, ಅವರ ಹೆಸರು ನೆನಪಿಲ್ಲ. ದುರ್ಗಿ ನನ್ನ ತಾಯಿಯ ತಾಯಿ. ದುರ್ಗಿಯ ತಾಯಿ ಗೇಣಿ ಪಡೆದ ಬಗ್ಗೆ, ಅವರಿಗೆ ಗೇಣಿ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ದುರ್ಗಿಯ ತಾಯಿಯವರಿಗೆ ಯಾರಿಂದ ಗೇಣಿ ಪಡೆದಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

ನಿ.ಪಿ.4 ರಲ್ಲಿ ನಮೂದಿಸಿರುವ ವ್ಯಕ್ತಿಗಳಿಂದ ಗೇಣಿ ಪಡೆದಿದ್ದಾರಾ ಎಂದರೆ ನನಗೆ ಮಾಹಿತಿ ಇಲ್ಲ. ನಿ.ಪಿ. 4 ರಲ್ಲಿ ನಮೂದಾಗಿರುವ ವ್ಯಕ್ತಿಗಳ ವಿಚಾರಣೆ ಭೂ ನ್ಯಾಯ ಮಂಡಳಿಯಲ್ಲಿ ಆಗಿದೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯಲ್ಲಿ 1 ನೇ ಪ್ರತಿವಾದಿ ಹೇಳಿಕೆ ಆಗಿರುತ್ತದೆ. 1 ನೇ ಪ್ರತಿವಾದಿ ಮತ್ತು ಭೂ ಮಾಲಿಕರು, ಭೂ ನ್ಯಾಯ ಮಂಡಳಿಯಲ್ಲಿ ನೀಡಲಾಗಿದ ಹೇಳಿಕೆಯನ್ನು ತಂದು ಹಾಜರು ಪಡಿಸಬಹುದಾ ಎಂದರೆ ಲಭ್ಯ ಇದ್ದಲ್ಲಿ ಹಾಜರು

ಪಡಿಸುವುದಾಗಿ ನುಡಿದಿರುತ್ತಾರೆ. ಸದರಿ ಹೇಳಿಕೆಗಳನ್ನು ಪಡೆಯಲು ಇದೂವರೆಗೂ ಪ್ರಯತ್ನಿಸಿಲ್ಲ. 1 ನೇ ಪ್ರತಿವಾದಿ ಶಾಲೆಗೆ ಹೋಗಿಲ್ಲ, ಅವರಿಗೆ ಓದಲು, ಬರೆಯಲು ಬರುವುದಿಲ್ಲ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ನಾನು ಹಾಜರು ಪಡಿಸಿದ ಡಿಕ್ಲರೇಶನ್ ನಲ್ಲಿ 1 ನೇ ಪ್ರತಿವಾದಿ ಓದಲು, ಬರೆಯಲು ಬರದ ಕಾರಣ ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ಕೇಳಿ ತಿಳಿದುಕೊಂಡು ಹೆಬ್ಬೆಟ್ಟು ಹಾಕಿರುವುದಾಗಿ ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ತಿಳುವಳಿಕೆ ಇಲ್ಲದ ಕಾರಣ ಸರ್ವೆ ನಂಬರ್ ತಪ್ಪುಗಳು ಕಂಡು ಬಂದಲ್ಲಿ ಸ್ಥಳ ತನಿಖೆ ಮಾಡಿಸಿ ಸರಿಪಡಿಸಬೇಕೆಂದು ನಮೂದು ಆಗಿದೆ ಎಂದರೆ ಸರಿಯಲ್ಲ. ನಿ.ಪಿ. 4 ರಲ್ಲಿ ಬೇರೆ ಯಾರ ಹೆಸರು ನಮೂದು ಆಗಿಲ್ಲ, ಅವರ ಇಬ್ಬರು ಅಪ್ರಾಪ್ತ ಮಕ್ಕಳು, ಅವಾಹಿತ ಮಗಳ ವಿವರ ಮಾತ್ರ ಇದೆ ಎಂದರೆ ಸಾಕ್ಷಿ ಅವರಿಗೆ ಸಂಬಂಧ ಪಟ್ಟಿದ್ದಲ್ಲ ಎಂದು ನುಡಿದಿರುತ್ತಾರೆ.

ನಿ.ಪಿ. 4 ರಲ್ಲಿರುವ ತಾರೀಕಿಂದು ನನ್ನ ತಾಯಿಗೆ ಮದುವೆ ಆಗಿತ್ತಾ ಎಂದರೆ ನನಗೆ ಮಾಹಿತಿ ಇಲ್ಲ. ನಿ.ಪಿ.4 ರಲ್ಲಿ ನಮೂದಾಗಿರುವ ಆಸ್ತಿ ದುರ್ಗಿಯವರಿಗೆ, ನನ್ನ ತಾಯಿಗೆ ಸೇರಿದ್ದಲ್ಲ, ಚಾಲಗೇಣಿ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಗೇಣಿ ಪಡೆಯುವ ಮೊದಲು ಬಡಿಯಾ ಆಚಾರರವರ ಸ್ವತ್ತು ಆಗಿತ್ತು ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿ 100 ವರ್ಷ ಎಂದು ನಮೂದಾಗಿರುವುದು 1 ನೇ ಪ್ರತಿವಾದಿಯ ಹೇಳಿಕೆಯ ಮೇಲಲ್ಲ, ಬರಹಗಾರರಿಂದ ತಪ್ಪಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬರಹಗಾರರಿಗೆ ಆ ರೀತಿ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದುರ್ಗಿಯು ಕೃಷಿ ಕಾರ್ಮಿಕರಾಗಿದ್ದು, ಯಾವುದೇ ಗೇಣಿ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ ಮತ್ತು ವಿಸ್ತೀರ್ಣದ ಸಂಪೂರ್ಣ ವಿವರ 1 ನೇ ಪ್ರತಿವಾದಿಗೆ ಇಲ್ಲದ ಕಾರಣ 1 ನೇ ಪ್ರತಿವಾದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸಂಪೂರ್ಣ ವಿವರ ಗೊತ್ತಿಲ್ಲದ ಕಾರಣ ಅಳತೆ ಮಾಡಿ ತೀರ್ಪಿನಲ್ಲಿ ನಿಖರವಾಗಿ ಹೇಳಲಾಗಿದೆ ಎಂದರೆ ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

1 ನೇ ಪ್ರತಿವಾದಿ ಗೇಣಿ ಪಡೆಯುವ ಕಾಲಕ್ಕೆ ಮತ್ತು ಡಿಕ್ಲರೇಶನ್ ಕೊಡುವ ಕಾಲಕ್ಕೆ ನನ್ನ ತಾಯಿ ಮದುವೆ ಆಗಿ ಗಂಡನ ಮನೆಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನಿ.ಪಿ.4 ರಲ್ಲಿ ಬರೆದ 100 ವರ್ಷ ಅನುಭವ ಎಂಬುದನ್ನು ತೀರ್ಪಿನಲ್ಲಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ 50 ವರ್ಷದ ಅನುಭವ ಎಂದು ನಮೂದಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ತೀರ್ಪು ಆಗುವಾಗ ಇದ್ದ ಸರ್ವೆ ನಂಬರ್ ಅದೇ ಇದೆ, ಹಿಸ್ಸಾ ನಂಬರ್ ಬೇರೆ ಆಗಿದೆ ಆ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ದಾವಾ ಐಟಂ ನಂಬರ್ 3 ರಿಂದ 7 ರ ಸ್ವತ್ತುಗಳು ಯಾರ ಹೆಸರಿನಲ್ಲಿದೆ ಎಂದರೆ ಮಾಹಿತಿ ಇಲ್ಲ. ದಾವಾ ಐಟಂ 3 ರಿಂದ 7 ರ ಸ್ವತ್ತುಗಳ ಪಹಣಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಕೆಲವು ಪಹಣಿಯಲ್ಲಿ ಲೋನ್ ಪಡೆದಿರುವುದು ಕಂಡುಬಂದಿದ್ದು, ಅದು ವ್ಯಯಕ್ತಿಕ ಲೋನಾ ಅಥವಾ ಕುಟುಂಬದ ಲೋನ್ ಎಂದರೆ ಕೃಷಿ ಸಾಲ ಪಡೆದಿರುವುದಾಗಿ ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಸ್ವಂತ ಹಕ್ಕಿನ ಆಧಾರದ ಮೇಲೆ ಅವರಿಗೆ ಲೋನ್ ನೀಡಲಾಗಿದೆ ಎಂದರೆ ಸರಿಯಲ್ಲ. ನಾನು ಸೊಸೈಟಿಯ ಸಿ.ಇ.ಓ ಆಗಿದ್ದು ಕೃಷಿ ಸಾಲ ಕೊಡುವಾಗ ಪಹಣಿಯನ್ನು ಮಾತ್ರ ಪಡೆದುಕೊಳ್ಳುವುದಾಗಿ ನುಡಿದಿರುತ್ತಾರೆ.

ನಿ.ಪಿ.1 ರಿಂದ 3 ರಲ್ಲಿ ನಮೂದಾಗಿರುವ ಸಾಲ ಯಾವ ಸಾಲ ಎಂದು ನನಗೆ ಹೇಳಲು ಸಾಧ್ಯ ಇಲ್ಲ. ದಾವೆಯಲ್ಲಿ ಸೊಸೈಟಿ ಹಿತಾಸಕ್ತಿ ಇರುವ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಬೇಕಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಒಂದು ಮನೆ ಇದೆ. ಸದರಿ ಮನೆಯನ್ನು ಎಲ್ಲರೂ ಸೇರಿ ಕಟ್ಟಿರುತ್ತೇವೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ದಾವಾ ಸ್ವತ್ತಿನಲ್ಲಿರುವ ಮನೆಗೆ ಸಂಬಂಧಿಸಿದ ಲೈಸನ್ಸ್ ಎಂದರೆ ಸರಿ ಎಂದು ಒಪ್ಪಿ ಕೊಂಡ ಮೇರೆಗ ನಿ.ಡಿ. 1 ಎಂದು ಗುರುತಿಸಲಾಯಿತು, ಸಾಕ್ಷಿ ಮುಂದುವರಿದು 1 ನೇ ಪ್ರತಿವಾದಿ ಯಜಮಾನ ಆಗಿದ್ದ ಕಾರಣ ಅವರ ಹೆಸರಿನಲ್ಲಿ ನೀಡಿರುವುದಾಗಿ ನುಡಿದಿರುತ್ತಾರೆ. ಸದರಿ ಮನೆಯನ್ನು ಕಟ್ಟಿಸಲು 1 ನೇ ಪ್ರತಿವಾದಿ ಸಂಪೂರ್ಣ ಹಣ ಖರ್ಚು ಮಾಡಿರುತ್ತಾರೆ ಎಂದರೆ ಎಲ್ಲರೂ ಸೇರಿ ಕಟ್ಟಿರುವುದಾಗಿ ನುಡಿದಿರುತ್ತಾರೆ. ಬೇರೆಯವರು

ಮನೆ ಕಟ್ಟಿಸಲು ಹಣ ನೀಡಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಮಾಹಿತಿ ಇಲ್ಲ. ನಿ.ಪಿ. 1 ರಿಂದ 3 ರಲ್ಲಿರುವ ಸಾಲವನ್ನು ಮನೆ ಕಟ್ಟುವ ಸಲುವಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸೊಸೈಟಿಯವರು ಪಕ್ಷಗಾರರಾಗಿಲ್ಲದಿದ್ದರೂ ನ್ಯಾಯಲಯದ ನಿರ್ಬಂಧಕಾಜ್ಞೆ ಆದೇಶ ತೋರಿಸಿ ಲೋನ್‌ನ್ನು ತೀರಿಸಲು ಬಿಟ್ಟಿಲ್ಲ ಎಂದರೆ ಸರಿಯಲ್ಲ. 3 ಲಕ್ಷ ಮತ್ತು 25 ಲಕ್ಷ ಲೋನ್ ಗೆ ಸಂಬಂಧಿಸಿದಂತೆ ಆಕ್ಷೇಪ ಮಾಡಿದ್ದಿರಾ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಲೋನ್ ಗೆ ಸಂಬಂಧಿಸಿದಂತೆ ನಾನು ಆಕ್ಷೇಪ ಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ನಾನು ಕೊಟ್ಟ ಆಕ್ಷೇಪಣೆ ಮೇರೆಗೆ ಸಾಲ ರಿನಿವಲ್ ಮಾಡಲು ಆಗುವುದಿಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ, ಸಾಕ್ಷಿಯು ನಾನು ಆಕ್ಷೇಪಣೆ ಕೊಟ್ಟಿರುತ್ತೇನೆ, ಆದರೆ ಈ ಹಿಂಬರದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

ಮನೆಗೆ ಒಟ್ಟು ಎಷ್ಟು ಖರ್ಚು ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತುಗಳಲ್ಲಿ ತೋಟ, ಮನೆ, ಬಾವಿ ಎಲ್ಲಾ ಇದೆ. ದಾವಾ ಸ್ವತ್ತುಗಳಲ್ಲಿ ಕೆಲವು ಗದ್ದೆಗಳಾಗಿದ್ದು, 1 ನೇ ಪ್ರತಿವಾದಿ ತಾವು ಖರ್ಚು ಮಾಡಿ ಅವುಗಳಲ್ಲಿ ಅಡಿಕೆ ತೋಟ, ತೆಂಗಿನ ತೋಟ ಮಾಡಿದ್ದಾರೆ ಎಂದರೆ ಎಲ್ಲರೂ ಸೇರಿ ಮಾಡಿರುವುದಾಗಿ ನುಡಿದಿರುತ್ತಾರೆ. ದಾವಾ ಸ್ವತ್ತುಗಳಲ್ಲಿ ಭತ್ತದ ಬೆಳೆ ಮತ್ತು ಇತರ ಕೃಷಿಗಳನ್ನು ಮೊದಲಿನಿಂದಲೂ 1 ನೇ ಪ್ರತಿವಾದಿ ಮಾಡುತ್ತಿದ್ದಾರೆ ಮತ್ತು ಹುಟ್ಟುವಳಿಯನ್ನು ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಬೇರೆ ಯಾರು ಕೃಷಿ ಮಾಡುತ್ತಿಲ್ಲ ಮತ್ತು ಹುಟ್ಟುವಳಿಯನ್ನು ಪಡೆಯುತ್ತಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಹೇಳಿರುವಷ್ಟು ಉತ್ಪತ್ತಿಗಳನ್ನು ಬೆಳೆಯುವಷ್ಟು ವಿಸ್ತೀರ್ಣ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವಂತಕ್ಕೆ ದಾವಾ ಸ್ವತ್ತುಗಳನ್ನು ಗೇಣಿ ಪಡೆದು, ಸ್ವಂತಕ್ಕೆ ಡಿಕ್ಲರೇಶನ್ ಕೊಟ್ಟಿದ್ದು, ಅವರ ಸ್ವಂತ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಾಲಾಗುವ ಆಸ್ತಿಗಳಲ್ಲ ಮತ್ತು ಅಳಿಯ ಕುಟುಂಬದ ಆಸ್ತಿಗಳಲ್ಲಾ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅವರ ಕುಟುಂಬದವರಿಗೆ ದಾವಾ ಸ್ವತ್ತುಗಳಲ್ಲಿ ಯಾವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**